ಆಗಿದ್ದೋ? ಸ್ವಯಂಸ್ಫೂರ್ತಿಯಿಂದ, ಅಂದ್ರ ಶೂನ್ಯದಿಂದ ಒಡಮೂಡಿದ್ದೋ? ಅಥವಾ ಇದರ ಹಿಂದ್ ಏನಾದ್ರೂ ಕಾರ್ಣ ಅದಾವೋ? ಅನತಕ್ಕಂಥ ಒಂದ್ ಜಿಜ್ಞಾಸೆ ಈ ಪ್ರಶ್ನೇದ ಹಿಂದ್ ಇರೂದನ್ನ ನಾವು ನೋಡ್ತೇವಿ.

ವೈಜ್ಞಾನಿಕವಾದಂಥಾ ಅಥವಾ ತರ್ಕಬದ್ಧವಾದಂಥಾ ಕಾರ್ಣಾ ಹುಡುಕೋದು ನಮ್ಮ ವೈಜ್ಞಾನಿಕ ಮನಸ್ಸಿನ ದ್ಯೋತಕ. ಆದ್ರ, ಕಲೆಯ ಬಗ್ಗೆ ಅಥವಾ ಕಾವ್ಯದ ಹುಟ್ಟಿನ ಬಗ್ಗೆ ನಾವು ವಿಚಾರಾ ಮಾಡೂ ಮುಂದ್, ಅದಕ್ಕ ಇಂಥಾ ಇದಮಿತ್ಥಂ ಅನ್ನತಕ್ಕಂಥಾ ಒಂದ್ ಉತ್ರಾ ಸಿಗತೈತಿ ಅನ್ನೂ ಖಾತ್ರೀ ನಮಗ ಇರೂದುಲ್ಲಾ. ಭಾಳ ಜನಾ ಕೇಳ್ತಾರ; ನೀವು ಕವನಾ ಬರೀತೀರೆಲ್ಲಾ, ನಿಮ್ಮ ವಂಶದೊಳಗ ಇಂಥಾ ಒಂದು ಕಾವ್ಯದ ವಾಹಿನಿ ಹರೀತದ ಏನು? ಅನತಕ್ಕಂಥಾ ಪ್ರಶ್ನಾ ಅದು. ಅಥವಾ ನಿಮ್ಮ ಪರಿಸರ, ನಿಮ್ಮ ಬಾಲ್ಯ, ನೀವು ಪಡೆದಂಥಾ ಒಂದು ಶಿಕ್ಷಣ ಇವೇನಾದ್ರೂ ಕಾರ್ಣಾ ಆದ್ವನೂ? ನಿಮ್ಮ ಕವಿ ಮ್ಯಾಲ ರಾಮಾಯಣ, ಮಹಾಭಾರತಾ, ವೇದ, ಉಪನಿಷತ್ತು ಇವೆಲ್ಲಾ ಬೀಳತಿದ್ವೋ ಹೆಂಗ್? ಅನತಕ್ಕಂಥಾದ್ದು ಮತ್ತೊಂದು. ಇಲ್ಲಾ ಯಾರಾದ್ರೂ ಕೈ ಕೊಟ್ಟ ಮ್ಯಾಲೆ ನೀವು ಕವಿ ಆಗಬೇಕಂತ ವಿಚಾರಾ ಮಾಡಿದ್ರ್ಯೋ ಹೆಂಗ್? ಅನ್ನೂದು ಮತ್ತೂ ಒಂದ್ ಪ್ರಶ್ನಾ. ಇನ್ನ, ಅಥವಾ ಯಾವ್ದಾದ್ರೂ ಒಬ್ಬ ಗುರು ಸಿಕ್ಕು ಕವಿ ಆಗಿ ಬದುಕಪಾ ಅಂತ ವರಾ–ಗಿರಾ ಕೊಟ್ನೋ ಹೆಂಗ್? ಅಥವಾ ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ನೀವು ಬರೀತೀರೋ ಹೆಂಗ್?–ಹೀಂಗ್ ಹುಡಿಕ್ಕೊಂತ ಹೋದ್ರ ಎಲ್ಲೀತನಕಾ ಹೋಗಬೌದು ಅಂತಂದ್ರ, ಪೂರ್ವ ಜಲ್ಮದ ಪಾಪ ಅಥವಾ ಪುಣ್ಯೇದಿಂದ ಕವಿಯಾಗಿರಬೇಕು ಅನ್ನೂತನ್ಕಾ ನಾವು ಉತ್ರಾ ಕೊಡಬೌದು. ಆದ್ರ, ಇವೆಲ್ಲಾ ಪ್ರಶ್ನೆಗಳು ಪ್ರಶ್ನೇನ ಆಗಿ ಯಾಕ ಉಳಿತಾವು ಅಂತಂದ್ರ, ಈ ಪ್ರಶ್ನೆಗಳಿಗೆ ಉತ್ರಾ ಇಲ್ಲ.

ಸಣ್ಣಾಂವಿದ್ದಾಗ ಹಾವೇರಿಯೊಳಗ ನಾನು ಹೈಸ್ಕೂಲ್ ವಿದ್ಯಾರ್ಥಿ ಆಗಿದ್ದಾಗ ನನಗ ಮೊದಲ್ನಿಂದs ಕಾವ್ಯ ಅಂದ್ರ, ನಾಟಕ ಅಂದ್ರ, ಕಾದಂಬರಿ–ಕಥೀ ಅಂದ್ರ ಭಾಳ ಆಸ್ಥಾ. ಆಮ್ಯಾಲೆ ಸುತ್ತಮುತ್ತಲೂ ಕವಿಗಳು ಅಂತೇನ ಕರಸ್ಕೊಳ್ತಿದ್ರಲ್ಲಾ, ಅವರ್ನ ನೋಡ್ತಿದ್ದೆ. ಅವರೊಂದ್ ನಮೂನಿ ವಿಚಿತ್ರವಾಗಿ ಇರತಿದ್ರು. ವೈಶಿಷ್ಟ್ಯಪೂರ್ಣವಾದಂಥಾ ವ್ಯಕ್ತಿತ್ವ ಅವರ್ದು. ಜನಗ್ಳೀಗ್ಯೂ ಅವರ ಬಗ್ಗೆ ಭಾಳ ಕುತೂಹಲ, ಜಿಜ್ಞಾಸೆ. ಅವರ್ಗೆ ಒಂದ್ ವಿಶೇಷವಾದಂಥಾ ಕಿಮ್ಮತ್ತನ್ನ ಜನಾ ಕೊಡತಿದ್ರು. ಈ ಅನನ್ಯತೆ ಏನೈತೆಲ್ಲಾ, ಕವಿಯ ವ್ಯಕ್ತಿತ್ವದ ಅನನ್ಯತೆ–ಅದು ನನಗ ಆಕರ್ಷಣೆಯ ಬಿಂದುವಾಗಿ ಕಂಡಿತ್ತು. ಹಿಂಗಾಗಿ ಬಹುಶಃ ನಾನೂ ಒಬ್ಬ ಕವಿ ಆಗಬೇಕು, ಜನಾ ನನ್ನ ನೋಡಿದ್ರ ನನ್ನ ಹೊಳ್ಳಿ ನೋಡ್ಬೇಕು, ನಾನು ಮಾತಾಡಿದ್ರ ಕಿವಿಯಾರೆ ಕೇಳ್ಬೇಕು, ಒಟ್ಟಿನ ಮ್ಯಾಲೆ ನಾನು ಅವರಿಗಿಂತ ಬ್ಯಾರೆ ಅಂತ ಅವ್ರು ನನ್ನ ಬಗ್ಗೆ ತಿಳಕೋಬೇಕು, ನಾನೂ ಹಂಗs ತಿಳಕೋಬೇಕು–ಹೀಂಗ್ ಇಂಥಾ ಮಹಾತ್ವಾಕಾಂಕ್ಷೆಯಿಂದ ನಾನು ಬರೀಲಿಕ್ಕೆ ಸುರೂ ಮಾಡ್ದೆ ಅಂತ ಕಾಣತೈತಿ.

ಆದ್ರ ಬರಬರ್ತಾ, ಬರಬರ್ತಾ ಈ ಕಾವ್ಯದ ಕ್ರಿಯಾ, ಬರವಣಿಗೆಯ ಕ್ರಿಯಾ ಗಟ್ಯಾಕ್ಕೋತ ಹೋದಂಗ್ ನನಗನಿಸ್ತು, ಇಲ್ಲೆ ಕವಿ ಮಾಡತಕ್ಕಂಥಾ ಕೆಲ್ಸಾ ಅಂದ್ರ, ಹೇಳ್ತಾರಲ್ಲ; –ನನ್ನ ಪಾಡನ್ನ ನಾನು ಹಾಡನ್ನಾಗಿ ಮಾಡ್ತೇನಿ– ಅಂತ, ಹಂಗ್ ನಾನು ಕಂಡಿದ್ದನ್ನ, ಕೇಳಿದ್ದನ್ನ, ಉಂಡಿದ್ದನ್ನ ಹೀಂಗ್ ಏನೇನೆಲ್ಲಾ ನನ್ನ ಅನುಭವದ ಕಕ್ಷೆಯೊಳಗ ಬರತೈತ್ಯೋ ಅದಕ್ಕ ಅಕ್ಷರದ ರೂಪಾ ಕೊಡ್ತೇನಿ ಅನತಕ್ಕಂಥದ್ದು ತಿಳಿವಳಿಕೆಗೆ ಬಂತು.

ಇರಬೌದು, ಒಂದು ಸಾಹಿತ್ಯ ಕೃತಿ ಆ ಕಲೆಗಾರನ ಅನುಭವದ ಅಭಿವ್ಯಕ್ತಿ ಆಗಿರಬೌದು. ಆದ್ರ ಅದ್ಕಿಂತ ಹೆಚ್ಚಿನದು ಏನ್ ಒಂದು ಪ್ರೇರ್ಣೆ ಇರಬೌದು ಅಂತಂದ್ರ ಈ ಭಾಷೆ ಅನ್ನತಕ್ಕಂಥ ಮಾಧ್ಯಮ ಏನೈತೆಲ್ಲಾ, ಈ ಮಾಧ್ಯಮ, ಇದರ ಅರ್ಥ, ಇದರ ಲಯಾ, ಇದರ ವ್ಯಂಜಕತೆ, ಇದರ ವ್ಯಂಗ್ಯ– ಇದೆಲ್ಲಾ ಒಂದು ದೊಡ್ಡ ಆಕರ್ಷಣೆಯಾಗಿ ಕಂಡು, ಈ ಮಾಧ್ಯಮದ ಮೂಲಕ ನನ್ನನ್ನು ನಾನು